**ಹೇಳಿದ ಜನಪದ ಕಲಾಕಾರರನ್ನೂ ನೀವು ಬರಹದ ಮೂಲಕ ಚಿರಸ್ಥಾಯಿಯಾಗಿಸಿದ್ದೀರಿ. 'ಸಾವಿರದ ಸಿರಿ ಬೆಳಗು'ವಿನ ಸಿರಿಯಜ್ಜಿ, ಕೊಂಡದ ಕಾಟಮ್ಮ, ಗಿರಿಯಯ್ಯ, ನರಸಜ್ಜ, ಹನುಮಜ್ಜಿ, ದಾನಮ್ಮ, ಕುಂಡಜ್ಜ, ವಾಜಿದಲ್ಲಾರಖ ಸಾಹೇಬ, ಶರಣಪ್ಪ... ಹೀಗೆ. ಅವರ ಮೂಲಕ ಸಿಗುವ ದರ್ಶನಗಳು ಏನು?**

ಕ್ಷೇತ್ರಕಾರ್ಯದ ಮೂಲಕ ನಾನು ಕಂಡ ವ್ಯಕ್ತಿಗಳು, ಅವರು ಹಾಡಿದ ಕಥನದ ಪಾತ್ರಗಳು ಯಾವುದೋ ಸ್ತರದಲ್ಲಿ ಅವು ಬೇರೆಬೇರೆಯಲ್ಲ ಎನಿಸಿದವು. ಸಿರಿಯಜ್ಜಿ, ಗಿರಿಯಯ್ಯ, ನರಸಜ್ಜರ ಬದುಕು ಬೇರೆಯಲ್ಲ, ಅವರ ಕಥನಗಳು ಬೇರೆಯಲ್ಲ. ಅವರ ಬದುಕುವ ಹಟವನ್ನು ಕಲಿಯುತ್ತಿದ್ದದ್ದು ಅವರು ನೆನಪಿನಲ್ಲಿಟ್ಟುಕೊಂಡ ಕಥನ ಪಾತ್ರಗಳ ಮೂಲಕವೇ. ಅವರಲ್ಲಿ ಜಾತಿ ಮತಗಳಿದ್ದರೂ ಅದರ ಕಂದಕ ದೊಡ್ಡದೇನಾಗಿರಲಿಲ್ಲ ಎನಿಸುತ್ತದೆ. ಈಗ ಹಾಗಿಲ್ಲವಲ್ಲ. ಜಾತ್ಯತೀತ ಅಂದುಕೊಂಡೇ ಅವರ ನಡುವಣ ಕಂದಕಗಳು ಆಳವಾಗುತ್ತಾ ಹೋಗುತ್ತಿವೆ. ಈ ಕಂದಕವನ್ನು ಹಳ್ಳಿಗಳಿಗೂ ಕೊಂಡೊಯ್ಯುತ್ತಿದ್ದೇವಲ್ಲಾ. ಕಾಯಕ ದೊಡ್ಡದು, ಜೀವನ ಮುಖ್ಯ ಎಂಬುದರೊಂದಿಗೆ ಸರಳತೆಯ ಘನತೆಯೂ ಅವರಲ್ಲಿದ್ದಿತು ಎನಿಸುತ್ತದೆ. ಇದೀಗ ಹಣದಿಂದ ಬರುತ್ತಿರುವ ಹತ್ತಾರು ಅನುಕೂಲಗಳು ನಮ್ಮನ್ನು ಹೈರಾಣವಾಗಿಸುತ್ತಿವೆಯಲ್ಲ. ವ್ಯಾಪಾರವೇ ಇಲ್ಲದೆ, ಮಾಲ್‌ಗಳನ್ನು ನೋಡದೆಯೇ ಯಾವ ಟ್ರಾಫಿಕ್‌ಜಾಮ್‌ಗೂ ಸಿಗದೆ ನಿರಾಳದಿಂದ ನಡೆದುಕೊಂಡೇ ಜನಪದರು ಜೀವನ ನಿರ್ವಹಿಸಿಬಿಟ್ಟರಲ್ಲ. ಇದೂ ಒಂದು ಜೀವನ ಮಾರ್ಗ ಎನಿಸುತ್ತದೆ ನನಗೆ. ಹಳ್ಳಿಗಳಲ್ಲಿ ಈ ಹೊತ್ತಿಗೂ ಇದು ಪಳೆಯುಳಿಕೆಯಂತೆ ಇದೆ. ಅದು ಉಳಿಯಬೇಕೇ, ಅಳಿಯಬೇಕೇ ಎಂಬ ದ್ವಂದ್ವವೂ ಇದೆ. ಉಳಿಯಬೇಕು ಅಂದರೆ ಅವರು ಹಾಗೆಯೇ ಇರಬೇಕೆ ಎಂಬ ಪ್ರಶ್ನೆ ಎದುರಾಗುತ್ತದೆ. ಅಳಿಯಬೇಕು ಎಂದರೆ ನಾವೆಲ್ಲ ತಲುಪುವ ಗಂತವ್ಯಸ್ಥಿತಿ ಯಾವುದು ಎಂಬುದು ನಮಗೆ ಗೊತ್ತಾಗುತ್ತಿಲ್ಲವಲ್ಲ. ಇಷ್ಟೆಲ್ಲಾ ಆಗಿ ಬೆಳಗೆರೆ ಕೃಷ್ಣಶಾಸ್ತ್ರಿಗಳಂಥವರು ಜೀವನಪರ್ಯಂತ ಬಾಗಿಲೇ ಇಲ್ಲದ ಗುಡಿಸಲಲ್ಲಿ ಬದುಕಿದರು. ಯಾವ ಹಣದ ವಹಿವಾಟೂ ಅವರಲ್ಲಿರಲಿಲ್ಲ. 1965ರಿಂದಲೇ ಗ್ರಾಮ ಭಾಗದಲ್ಲಿ ಶಾಲೆಯನ್ನು ತೆರೆದು ಮಕ್ಕಳಿಗೆ ಊಟ ಹಾಕಿ ಅಕ್ಷರ ಕಲಿಸಿದರು. ಇತ್ತ ಗೊಲ್ಲರಹಟ್ಟಿಯ ಸಿರಿಯಜ್ಜಿಯಾದರೂ ಅಷ್ಟೆ. ಕಾಸಿನ ಪರಿಚಯವೇ ಇಲ್ಲದೆ 95 ವರ್ಷಗಳ ಕಾಲ ಬದುಕಿದವಳು. ಗಂಡ ಸತ್ತರೂ ತಾನು ವಿಧವೆಯಲ್ಲ ಅಂದುಕೊಂಡಿದ್ದಳು. ಇದು ಕಾಡುಗೊಲ್ಲ ಬುಡಕಟ್ಟಿನವರ ಪ್ರಬಲ ನಂಬಿಕೆ. ಮೂವತ್ತನೇ ವಯಸ್ಸಿಗೆ ಗಂಡ ಸತ್ತರೂ ಮಕ್ಕಳನ್ನು ಸಾಕಿದವಳು. ಬದುಕು ಸಾಗಿಸಿದವಳು. ಸಾವಿರಾರು ತ್ರಿಪದಿಗಳನ್ನು ಹಾಡುವವಳಾಗಿದ್ದಳು. ಆದರೆ ಜನಪದರಲ್ಲಿ ಅಪಾರ ನಂಬಿಕೆಗಳಿರುವಂತೆ ಅಷ್ಟೇ ಸಂಖ್ಯೆಯ ಮೌಢ್ಯ ಮತ್ತು ಬಡತನ ಇದ್ದೇ ಇದೆ.

- **ವಿಶ್ವದ ಬೇರೆ ಭಾಷೆಗಳಿಗೆ ಹೋಲಿಸಿದರೆ ಭಾರತದಲ್ಲಿ ಜನಪದ ಸಾಹಿತ್ಯ ಸಂಗ್ರಹ, ಪ್ರಕಟಣೆ, ಅಧ್ಯಯನಗಳು, ಶುರುವಾದುದು ಬಹಳ ತಡವೇ. ಕನ್ನಡವೂ ಇದಕ್ಕೆ ಹೊರತಲ್ಲ. ಜಾನಪದ ವಿಶ್ವವಿದ್ಯಾಲಯ ಹುಟ್ಟು ಹಾಕಿದ ಮತ್ತು ಜಾನಪದ ಅಕಾಡೆಮಿಯ ಹೆಗ್ಗಳಿಕೆಯ ನಮ್ಮಲ್ಲಿ ಈ ಕೆಲಸ ಕಾರ್ಯಗಳು ಹೇಗಾಗುತ್ತಿವೆ? ಭಾರತದ ಆಚೆ ಭಾರತೀಯ ಜಾನಪದ ಹಾಗೂ ಅಧ್ಯಯನ ಕುರಿತ ಅಭಿಪ್ರಾಯವೇನಿದೆ?**

ಈ ಮಾತು ನಿಜ. ಪಾಶ್ಚಾತ್ಯ ಜಗತ್ತಿನಲ್ಲಿ ಜಾನಪದ ಸಂಗ್ರಹ ಆರಂಭವಾಗಿ ಎರಡು ಮೂರು ಶತಮಾನಗಳೇ ಕಳೆದವು. ನಮ್ಮಲ್ಲಿ ಆದದ್ದು 1900 ರಿಂದ ಈಚೆಗೆ. ಅಂದರೆ ನಮ್ಮ ಜಾನಪದ